

ಕುರಿ ರೊಪ್ಪದ ಎದುರಿನ ಹಿಮಪರ್ವತಗಳು

ಅಸಾಧಾರಣ ಸೌಂದರ್ಯ ಹಾಗೂ ಘನತೆಯ ಪ್ರತೀಕಗಳಂತೆ ಕಾಣಿಸುವ ಹಿಮಪರ್ವತಗಳು ನೋಡುಗರ ಪಾಲಿಗೆ ಸದಾ ಬೆರಗು–ಬೆಡಗು. ಪ್ರತಿ ನೋಟಕ್ಕೂ ಹೊಸತಾಗಿ ಕಾಣಿಸುವ ಹಿಮಪರ್ವತ ಪ್ರದೇಶಗಳ ಕಣಿವೆ, ಬಯಲು, ಶಿಖರಗಳ ಹಾದಿ ಪ್ರಕೃತಿಯ ಅನಂತ ಸಾಧ್ಯತೆಗಳ ಅನಾವರಣಗೊಳಿಸುವಂತಿರುತ್ತದೆ. ಹಿಮಪರ್ವತಗಳ ಹಾದಿಯಲ್ಲಿ ಸಹೃದಯರನ್ನು ಕರೆದೊಯ್ಯುವ ಈ ‘ಅನುಭವ ಕಥನ’ ಎದೆಯ ಕಾವನ್ನು ಮಾರ್ದವಗೊಳಿಸುವಷ್ಟು ಮೋಹಕವೂ ಜೀವಂತವೂ...

ಕರ್ನಾಟಕದಲ್ಲಿ ಮಂಜು ಮುಸುಕುವ ಕೊಡಚಾದ್ರಿ ಬಾಬಾಬುಡನಗಿರಿ, ಮುಳ್ಳಯ್ಯನಗಿರಿ, ಕುದುರೆಮುಖ, ಕುಮಾರಪರ್ವತ, ನಂದಿಬೆಟ್ಟ, ಹಿಮವದ್ ಗೋಪಾಲಸ್ವಾಮಿ ಬೆಟ್ಟಗಳಿವೆ. ಇವುಗಳ ಹೆಸರಲ್ಲಿ ಪರ್ವತ, ಗಿರಿ, ಹಿಮ ಶಬ್ದಗಳಿದ್ದರೂ ಇವು ಪರ್ವತಗಳಲ್ಲ. ದೊಡ್ಡಬೆಟ್ಟಗಳು ಅಷ್ಟೆ. ಹಿಮಾಲಯನ್ ಪರ್ವತಗಳ ಮುಖ್ಯ ಚಹರೆಯೇ ಊಹಾತೀತ ಬೃಹದಾಕಾರ, ಬಾನೆತ್ತರಕ್ಕೆ ಚಿಮ್ಮಿದ ಶಿಖರ, ತಲೆಗೆ ಬಿಳಿ ರುಮಾಲು ಕಟ್ಟಿದಂತೆ ಹಿಮ, ಆಳ ಕಣಿವೆ, ಅದರ ಮಡಿಲನ್ನು ತುಂಬುವ ಹಸಿರು ಹಾಗೂ ಇಳುಕಲುಗಳಲ್ಲಿ ಹುಟ್ಟಿ ಭೋರ್ಗರೆವ ಹಿಮನದಿಗಳು. ಇವೆಲ್ಲವೂ ಬರುವಂತೆ ಪಟ ತೆಗೆಯಲು ಎಷ್ಟು ಯತ್ನಿಸಿದ್ದೇನೆ? ಇನ್ನಾವುದೋ ಅಂಶ ಚೌಕಟ್ಟಿನಾಚೆ ಉಳಿದು ಕ್ಯಾಮೆರಾ ಕಣ್ಣಿನ ಮಿತಿಯನ್ನು ಕಾಣಿಸುತ್ತದೆ. ಇಂಗ್ಲೀಷಿನ ‘ವಿ’ ಅಕ್ಷರಗಳನ್ನು ಒಂದರ ಹಿಂದೆ ಮತ್ತೊಂದು ಜೋಡಿಸಿದಂತೆ ಪರ್ವತಕೋನಗಳು ಸೇರಿ ರೂಪಿಸುವ ಕಣಿವೆಯೊಳಗೆ, ಬೆಳ್ಳಿರಸದಂತೆ ಹರಿವ ಹಿಮನದಿಯ ಚಿತ್ರ ಮಾತ್ರ ಉಳಿಯುತ್ತದೆ.

ನಮ್ಮ ತಾರುಣ್ಯದ ದಿನಗಳಲ್ಲಿ ಪ್ರೇಮಿಗಳು ಹಿಮಹಾಸಿನಲ್ಲಿ ಜಾರುವ, ಉಂಡೆಮಾಡಿ ಎಸೆದಾಡುವ ಸಿನಿಮಾ ದೃಶ್ಯಗಳನ್ನು ನೋಡುತ್ತ ಬೆರಗಾಗುತ್ತಿದ್ದೆವು. ಬಾಳಿನಲ್ಲಿ ಒಮ್ಮೆ ಹಿಮದ ಮೇಲೆ ನಡೆಯಬೇಕೆಂದು ಆಸೆ ಆಗುತ್ತಿತ್ತು. ಚಾರಣದ ನೆಪ ಮಾಡಿಕೊಂಡು ತವಕದಿಂದ ನಲವತ್ತನೇ ವಯಸ್ಸಿನಲ್ಲಿ ಹಿಮಾಲಯಕ್ಕೆ ಹೋದೆ. ಹಿಮಾಲಯ ಪರ್ವತವು ತನ್ನ ಪ್ರಪ್ರಥಮ ದರ್ಶನವನ್ನು ಕಲ್ಕಾದಲ್ಲಿ ಕೊಟ್ಟಿತು. ಪರ್ವತ ಶ್ರೇಣಿ ಮುಗಿಯುತ್ತ ಬಯಲು ಆರಂಭವಾಗುವ ಅಂಚಿನಲ್ಲಿರುವ ಹರಿಯಾಣದ ಊರಿದು. ನಾನು ಕಂಡ ಪರ್ವತವೇನೋ ಬೃಹತ್ತಾಗಿತ್ತು. ಹಿಮವಿರಲಿಲ್ಲ. ನಿರಾಸೆಯಾಯಿತು.

ಹಿಮಾಚ್ಛಾದಿತ ಪರ್ವತವನ್ನು ನೋಡುವ ಮೊದಲ ಅವಕಾಶ ಧರ್ಮಶಾಲೆಯಲ್ಲಿ ಸಿಕ್ಕಿತು. ಅದು ಕಂಡ ರೀತಿ ನಾಟಕೀಯವಾಗಿತ್ತು. ಕಾಂಗಡಾ ಪಟ್ಟಣದಿಂದ ಬೌದ್ಧವಿಹಾರವಿರುವ ಧರ್ಮಶಾಲೆಗೆ ಬಾನು, ನಾನು ಪಯಣಿಸುತ್ತಿದ್ದೆವು. ಬಸ್ಸಿನಲ್ಲಿ ಸೀಟಿಲ್ಲದೆ ನಿಂತಿದ್ದ ನಾನು, ನನ್ನ ಉದ್ದಗೊರಳನ್ನು ಬಾಗಿಸಿ ಕಿಟಕಿಯೊಳಗಿಂದ ಕಾಣುವ ವಿಸ್ತಾರ ಕಣಿವೆಯನ್ನೂ ಕ್ಯಾನ್‌ವಾಸಿನಲ್ಲಿ ಚಿತ್ರ ಬಿಡಿಸಿದಂತೆ ತೇಪೆಹಚ್ಚಿದ ಕೌದಿಯಂತೆ ಇದ್ದ ಹೊಲಗದ್ದೆಗಳನ್ನೂ ನಿರುಕಿಸುತ್ತಿದ್ದೆ. ಬಾನು ಪಕ್ಕೆ ತಿವಿದು– ‘ಏ, ಅಲ್ನೋಡು’ ಎಂದು ಬಸ್ಸಿನ ಮುಂಗಾಜಿನತ್ತ ಬೆರಳು ಮಾಡಿದಳು. ಹಿಮಶಿಖರಗಳು! ಓಹ್, ಎಷ್ಟು ವರ್ಷಗಳಿಂದ ಚಾತಕದಂತೆ ಕಾಯುತ್ತಿದ್ದೆ? ಕಂದುಗಲ್ಲಿನ ಶಿಖರಗಳಿಗೆ ಯಾರೋ ತೊಡಿಸಿದ ಬೆಳ್ಳಿಕುಲಾವಿಯಂತೆ, ಮಗುವೊಂದು ತಲೆಯ ಮೇಲೆ ಸುರಿದುಕೊಂಡ ಹಿಟ್ಟಿನಂತೆ, ಆಗಸವೇ ಹೆಪ್ಪಿಟ್ಟು ಹಾಲಿನ ಅಭಿಷೇಕಗೈದ ಶಿವಲಿಂಗದಂತೆ ಅವು ಕಂಡವು. ಧ್ಯಾನಮಗ್ನಿಯಂತಿದ್ದ ಪರ್ವತಗಳ ಮೇಲೆ ಆಗಷ್ಟೆ ಬಿದ್ದು ವಿಶ್ರಮಿಸುತ್ತಿದ್ದ ಹಿಮವು, ಬುದ್ಧನ ಮುಖದಲ್ಲಿ ಲಾಸ್ಯವಾಡುವ

ಚಿತ್ರಗಳು: ಲೇಖಕರವು